# ಕರ್ನಾಟಕ ಸರ್ಕಾರದ ನಡವಳಿ

**ವಿಷಯ**:- ಪರಿಷ್ಕೃತ ವೇತನ ಮತ್ತು ನಿವೃತ್ತಿ ವೇತನದ ಬಾಕಿಯನ್ನು ಪಾವತಿಸುವ ಬಗ್ಗೆ.

**ಓದಲಾಗಿದೆ**: ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 8 ಎಸ್‌ಆರ್‌ಪಿ 2007 ದಿನಾಂಕ 16-5-2007.

**ಪ್ರಸ್ತಾವನೆ**:

ಮೇಲೆ ಓದಲಾದ ದಿನಾಂಕ 16-5-2007ರ ಸರ್ಕಾರಿ ಆದೇಶದಲ್ಲಿ 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳನ್ವಯ ರಾಜ್ಯ ಸರ್ಕಾರಿ ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸಲಾಗಿದೆ. ಈ ಪರಿಷ್ಕೃತ ವೇತನ ಶ್ರೇಣಿಗಳನ್ನು 2005ರ ಜುಲೈ 1 ರಿಂದ ಜಾರಿಗೆ ಬರುವಂತೆ ಕಾಲ್ಪನಿಕವಾಗಿ ಜಾರಿಗೊಳಿಸಲಾಗಿದ್ದು, 1ನೇ ಏಪ್ರಿಲ್ 2006 ರಿಂದ 31ನೇ ಮಾರ್ಚ್ 2007ರ ವರೆಗಿನ ಅವಧಿಯ ವೇತನ ಮತ್ತು ಭತ್ಯೆಗಳ ಹಾಗೂ ನಿವೃತ್ತಿ ವೇತನದ ಹೆಚ್ಚಳದ ಬಾಕಿ ಮೊತ್ತವನ್ನು 2008-09ನೇ ಆರ್ಥಿಕ ವರ್ಷದಲ್ಲಿ ಸಂದಾಯ ಮಾಡಲಾಗುವುದೆಂದು ಆದೇಶಿಸಲಾಗಿತ್ತು. ಸದರಿ ಬಾಕಿ ಪಾವತಿ ಕುರಿತು ಸೂಕ್ತ ಆದೇಶ ಹೊರಡಿಸುವ ಅವಶ್ಯಕತೆ ಇರುತ್ತದೆ. ಅದರಂತೆ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 5 ಎಸ್‌ಆರ್‌ಪಿ 2008
## ಬೆಂಗಳೂರು, ದಿನಾಂಕ 25ನೇ ಮಾರ್ಚ್ 2008

**2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳನ್ವಯ ವೇತನ ನಿಗದಿಯಿಂದ 1ನೇ ಏಪ್ರಿಲ್ 2006 ರಿಂದ 31ನೇ ಮಾರ್ಚ್ 2007ರ ವರೆಗಿನ ಅವಧಿಯಲ್ಲಿ ಹೆಚ್ಚಳವಾಗುವ ವೇತನ ಮತ್ತು ಭತ್ಯೆಗಳ ಬಾಕಿ ಮೊತ್ತವನ್ನು 2008-09ನೇ ಸಾಲಿನ ಆರ್ಥಿಕ ವರ್ಷದಲ್ಲಿ ಪಾವತಿಸಲು ಸರ್ಕಾರಿ ನೌಕರರ ವರ್ಗೀಕರಣವನ್ನು ಆಧರಿಸಿ ಈ ಕೆಳಕಂಡ ಅವಧಿಗೆ ಕ್ರಮಬದ್ಧಗೊಳಿಸಲು ಆದೇಶಿಸಿದೆ.**

| ಕ್ರ. ಸಂ. | ಸರ್ಕಾರಿ ನೌಕರರ ವರ್ಗೀಕರಣ | 2007 ವೇತನ ಶ್ರೇಣಿ | ಪಾವತಿಸಲಾಗುವ ಅವಧಿ |
|---|---|---|---|
| 1 | "ಡಿ" ಗುಂಪು | 4800-7275 | 2008 ರ ಮೇನಿಂದ 2008ರ ಜೂನ್‌ವರೆಗೆ |
| 2 | | 5200-8200 | |
| 3 | | 5500-9500 | |
| 4 | "ಸಿ" ಗುಂಪು | 5800-10500 | 2008 ರ ಜುಲೈನಿಂದ 2008ರ ಸೆಪ್ಟೆಂಬರ್‌ವರೆಗೆ |
| 5 | | 6250-12000 | |
| 6 | | 6800-13000 | |
| 7 | | 7275-13350 | |
| 8 | | 8000-14800 | |
| 9 | | 8825-16000 | |
| 10 | | 9500-17250 | |
| 11 | | 10000-18150 | |
| 12 | "ಬಿ" ಗುಂಪು | 10800-20025 | 2008ರ ಅಕ್ಟೋಬರ್‌ನಿಂದ 2008ರ ಡಿಸೆಂಬರ್‌ವರೆಗೆ |
| 13 | | 11400-21600 | |
| 14 | | 12000-22650 | |
| 14(ಎ) | | ***12650-23250 (sui-generis pay scale)*** | |
| 15 | | 13000-23850 | |

| | | | |
|---|---|---|---|
| 16 | "ಎ" ಗುಂಪು | 14050-25050 | 2009ರ ಜನವರಿಯಿಂದ 2009ರ ಫೆಬ್ರವರಿವರೆಗೆ |
| 17 | | 15200-25650 | |
| 18 | | 16400-26250 | |
| 19 | | 18150-26925 | |
| 20 | | 19050-27600 | |
| 21 | | 20025-28275 | |
| 22 | | 22125-30300 | |
| 23 | | 24450-31800 | |
| 24 | | 26250-36500 | |
| 25 | | 28275-39900 | |

ವೇತನ ಶ್ರೇಣಿಗಳ ಪರಿಷ್ಕರಣೆಯ ಕಾರಣದಿಂದ ದಿನಾಂಕ 1–4–2006 ರಿಂದ 31–3–2007 ರವರೆಗಿನ ಅವಧಿಗೆ ಆಗಿರುವ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಹೆಚ್ಚಳದ ಬಾಕಿ ಮೊತ್ತವನ್ನು 2008ರ ಮೇ ನಿಂದ 2008ರ ಜೂನ್ ವರೆಗಿನ ಅವಧಿಯಲ್ಲಿ ಸಂದಾಯ ಮಾಡತಕ್ಕದ್ದು. ಹಾಗೂ ಮರಣ ಮತ್ತು ನಿವೃತ್ತಿ ಉಪದಾನದ (ಡಿಸಿಆರ್‌ಜಿ) ಬಾಕಿ ಮೊತ್ತವನ್ನು 2008ರ ಜುಲೈನಿಂದ 2008ರ ಸೆಪ್ಟೆಂಬರ್ ವರೆಗಿನ ಅವಧಿಯಲ್ಲಿ ಸಂದಾಯ ಮಾಡತಕ್ಕದ್ದು.

ಈ ಆದೇಶವು 2007 ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳನ್ನು ವಿಸ್ತರಿಸಲಾಗಿರುವ ಅನುದಾನ ಪಡೆಯುವ ಶಿಕ್ಷಣ ಸಂಸ್ಥೆಗಳ ನೌಕರರಿಗೆ, ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗೆ ಹಾಗೂ ಸ್ಥಳೀಯ ಸಂಸ್ಥೆಗಳ (ಪಟ್ಟಣ ಪಂಚಾಯಿತಿ/ಪಟ್ಟಣ ಪುರಸಭೆ/ನಗರಸಭೆ/ಮಹಾನಗರ ಪಾಲಿಕೆಗಳು) ನೌಕರರಿಗೂ ಅನ್ವಯಿಸತಕ್ಕದ್ದು.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಸುಂದರ ರಾಜ ಗುಪ್ತ)**
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು–2)

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 500 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
3. ಇಲಾಖಾ ಮುಖ್ಯಾಧಿಕಾರಿಗಳು.
4. ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
7. ಮಹಾಲೇಖಪಾಲರು (ಕಂದಾಯ ಸ್ವೀಕೃತಿ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
8. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
9. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
10. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
12. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ಬೆಂಗಳೂರು.
14. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
15. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
16. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
17. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
18. ವಾರಪತ್ರ/ಶಾಖೆಯ ರಕ್ಷಾ ಕಡತ.

[ಕ್ರಮ ಸಂಖ್ಯೆ: 9, 10, 11, 12 ಮತ್ತು 13 ರಲ್ಲಿ ನಮೂದಿತವಾದ ಅಧಿಕಾರಿಗಳಿಗೆ ಪತ್ರದ ಮೂಲಕ.]